ಮಾರ್ಚ್ 1998ರ ಅಂತ್ಯದೊಳಗೆ ಮಾರ್ಚ್ ತಿಂಗಳಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಮಂಗಳೂರು ಟಿ.ಡಿ.ಆರ್. ವ್ಯವಸ್ಥೆ

112 (224)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾರಾಷ್ಟ್ರ ರಾಜ್ಯದ ಮುಂಬೈಯಲ್ಲಿ ಇದ್ದಹಾಗೆಯೆ, ಮಂಗಳೂರಿನಲ್ಲೂ ಟಿ.ಡಿ.ಆರ್ (ಟ್ರಾನ್ಸ್‌ಫರಿಂಗ್ ಆಫ್ ಡೆವಲಪ್‌ಮೆಂಟಲ್ ರೈಟ್ಸ್) ವ್ಯವಸ್ಥೆ ಅನುಷ್ಠಾನಕ್ಕೆ ತರಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಮಹಾರಾಷ್ಟ್ರ ರಾಜ್ಯದ ಮುಂಬೈ ನಗರದಲ್ಲಿ ಇರುವಂತೆ ಟಿ.ಡಿ.ಆರ್ (ಟ್ರಾನ್ಸ್‌ಫರಿಂಗ್ ಆಫ್ ಡೆವಲಪ್‌ಮೆಂಟಲ್ ರೈಟ್ಸ್) ವ್ಯವಸ್ಥೆಯನ್ನು ರಾಜ್ಯದ ನಗರಗಳಲ್ಲಿ (ಮಂಗಳೂರು ನಗರವೂ ಸೇರಿದಂತೆ) ಅನುಷ್ಠಾನಕ್ಕೆ ತರಲು ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ಕ್ಕೆ ತಿದ್ದುಪಡಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಇದನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ಕ್ಕೆ ತಿದ್ದುಪಡಿ ತಂದ ನಂತರ ಕಾರ್ಯರೂಪಕ್ಕೆ ತರಲಾಗುವುದು.

ಮಂಗಳೂರಿನಲ್ಲಿ ಸಮಗ್ರ ಕುಡಿಯುವ ನೀರಿನ ಯೋಜನೆ.

113 (225)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಗಳೂರಿನಲ್ಲಿ ಸಮಗ್ರ ಕುಡಿಯುವ ನೀರಿನ ಹಾಗೂ ಒಳಚರಂಡಿ ಯೋಜನೆಯ ಅಭಿವೃದ್ಧಿಯನ್ನು ಕೈಗೊಳ್ಳಲು ಸರಕಾರ ಯಾವ ಕ್ರಮ ಕೈಗೊಂಡಿದೆ ಹಾಗೂ ಇದರ ಅಧ್ಯಯನ ವ್ಯವಸ್ಥೆ ಮಾಡಲಾಗಿದೆ?

2. ಸದರಿ ಯೋಜನೆಗೆ ವಿಶ್ವಬ್ಯಾಂಕ್ ಅಥವಾ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಂದ ಎಷ್ಟು ಸಾಲ ಪಡೆಯಲಾಗುವುದು ಹಾಗೂ ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

3. ವೆಂಟೆಡ್ ಡ್ಯಾಂನ ಕಂಬಗಳನ್ನು ಕರ್ನಾಟಕ ಕನ್ಸ್‌ಟ್ರಕ್ಷನ್ ಸಂಸ್ಥೆಯಿಂದ ಎಷ್ಟು ಸಮಯದೊಳಗೆ ದುರಸ್ಥಿ ಮಾಡಲಾಗುವುದು.

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

1. ಮಂಗಳೂರು ನಗರಕ್ಕೆ ಕುಡಿಯುವ ನೀರಿನ ಸಮಗ್ರ ನೀರು ಸರಬರಾಜು ಯೋಜನೆಯನ್ನು ರೂ. 14.00 ಕೋಟಿಗಳ ಮೊತ್ತದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದ್ದು, ಯೋಜನೆಯ ಶೇ. 7ರಷ್ಟು ಪೂರ್ಣಗೊಂಡಿರುತ್ತದೆ. 1995ರಲ್ಲಿ ಮಂಗಳೂರು ನಗರಕ್ಕೆ ಹೊಸ ಪ್ರದೇಶಗಳ ಸೇರ್ಪಡೆಯೊಂದಿಗೆ ಬೃಹತ್ ಮಂಗಳೂರಾಗಿ ಪರಿವರ್ತಿಸಲಾಗಿದ್ದು, ಸಮಗ್ರ ನೀರು ಸರಬರಾಜು ಯೋಜನೆ ಅಧ್ಯಯನಕ್ಕೆ ದಿನಾಂಕ 29.1.98ರಲ್ಲಿ ಖಾಸಗಿ ಸಂಸ್ಥೆಯಾದ ಮೆ: ಕನ್‌ಸಲ್‌ಟಿಂಗ್ ಇಂಜಿನಿಯರಿಂಗ್ ಇಂಡಿಯಾ ಸರ್ವಿಸಸ್ ಲಿ. ನವದೆಹಲಿ, ಇವರಿಗೆ ವಹಿಸಲು ನಿರ್ಧರಿಸಲಾಗಿದೆ. ಮಂಗಳೂರು ನಗರದ ಸಮಗ್ರ ಒಳಚರಂಡಿ ಯೋಜನೆಯ ಅಧ್ಯಯನಕ್ಕೆ ಕ್ರಮ ತೆಗೆದುಕೊಳ್ಳಬೇಕಾಗಿದೆ.

2. ಮೇಲೆ ತಿಳಿಸಿದ ಸಂಸ್ಥೆಯಿಂದ ಕಾರ್ಯ ಸಾಧ್ಯತಾ ವರದಿ ಮತ್ತು ವಿವರವಾದ ಅಂದಾಜುಪಟ್ಟಿ ತಯಾರಿಸಿದ ನಂತರ ಸದರಿ ಹಣಕಾಸು ಸಂಸ್ಥೆಗಳಿಂದ ಅಂದಾಜು ಮೊತ್ತಕ್ಕೆ ಅನುಗುಣವಾಗಿ ಸಾಲಪಡೆಯಲು ನಿರ್ಧರಿಸಲಾಗುವುದು.

3. ಈ ಬಗ್ಗೆ ಕರ್ನಾಟಕ ಕನ್ಸ್‌ಟ್ರಕ್ಷನ್ ಸಂಸ್ಥೆಯೊಂದಿಗೆ ಚರ್ಚಿಸಿ, ಬಾಕಿ ದುರಸ್ತಿ ಕಾಮಗಾರಿಯನ್ನು 98-99ನೇ ಸಾಲಿನ ಕಾರ್ಯ ನಿರ್ವಾಹಕ ಅವಧಿ (ವರ್ಕಿಂಗ್-ಸೀಸನ್)ನಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುವ ನೌಕರರನ್ನು ಖಾಯಂಗೊಳಿಸುವುದು

114 (226)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ವಿದ್ಯುತ್ ಕುಡಿಯುವ ನೀರು ಹಾಗೂ ಆರೋಗ್ಯ ವಿಭಾಗದಲ್ಲಿ ಕಳೆದ 10 ವರ್ಷಗಳಿಂದ ದುಡಿದ ಕಾರ್ಮಿಕರನ್ನು ಖಾಯಂ